ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು

ಸಂಖ್ಯೆ: ಟಿಸಿಎನ್/360/2019–20 ದಿನಾಂಕ: 11-02-2020

# ಸುತ್ತೋಲೆ

ವಿಷಯ: ಕಿರಿಯ ವೈದ್ಯಕೀಯ ರೇಡಿಯಾಲಾಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಯಿಂದ ಹಿರಿಯ ವೈದ್ಯಕೀಯ ರೇಡಿಯಾಲಾಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ

ಉಲ್ಲೇಖ: ಈ ನಿರ್ದೇಶನಾಲಯದ ಅ.ಜ್ಞಾ. ಪತ್ರ ಸಂಖ್ಯೆ: ಟಿಸಿಎನ್/95/2019–20 ದಿನಾಂಕ: 13–01–2020

*****

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಿರಿಯ ವೈದ್ಯಕೀಯ ರೇಡಿಯಾಲಾಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಯಿಂದ ಹಿರಿಯ ವೈದ್ಯಕೀಯ ರೇಡಿಯಾಲಾಜಿಕಲ್ ಟೆಕ್ನಾಲಾಜಿಸ್ಟ್ ಹುದ್ದೆಗೆ ಪದೋನ್ನತಿ ನೀಡಲು ಉಲ್ಲೇಖದಲ್ಲಿ ಹೊರಡಿಸಿರುವ ಈ ಕೆಳಕಂಡ ಜೇಷ್ಠತಾ ಸಂಖ್ಯೆ ಹೊಂದಿರುವವರು ದಿನಾಂಕ: 20–02–2020ರ ಒಳಗಾಗಿ ಈ ಕೆಳಕಂಡ ದಾಖಲಾತಿಗಳೊಂದಿಗೆ ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಶಸ್ತ್ರಚಿಕಿತ್ಸಕರು ರವರ ಮುಖೇನ ಸಲ್ಲಿಸಲು ಸೂಚಿಸಿದೆ.

1. ಸಾಮಾನ್ಯ ವರ್ಗ ಜೇಷ್ಠತಾ ಸಂಖ್ಯೆ : 1 ರಿಂದ 100 ರವರೆಗೆ
2. ಪರಿಶಿಷ್ಟ ಜಾತಿ /ಪಂಗಡ ವರ್ಗದವರು ಜೇಷ್ಠತಾ ಸಂಖ್ಯೆ 1 ರಿಂದ 100 ರವರೆಗೆ
3. 5 ವರ್ಷಗಳ ರಹಸ್ಯ ವರದಿ (2015–16, 2016–17, 2017–2018, 2018–19 ಮತ್ತು 2019–20)
4. ಖಾಯಂಪೂರ್ವ ಸೇವಾವಧಿ ಘೋಷಣೆ ಪ್ರತಿ
5. ಕನ್ನಡ ಭಾಷಾ ಪರೀಕ್ಷೆ ಉತ್ತೀರ್ಣ/ವಿನಾಯ್ತಿ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ದೃಢೀಕರಣ ಪತ್ರ
6. ವಿದ್ಯಾರ್ಹತೆ ಪ್ರಮಾಣ ಪತ್ರ
7. ತರಬೇತಿ ಪ್ರಮಾಣ ಪತ್ರ
8. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ನೌಕರರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ)
9. ಇಲಾಖಾ ವಿಚಾರಣೆ ಬಗ್ಗೆ ದೃಢೀಕರಣ ಪತ್ರ
10. ಹೈದ್ರಾಬಾದ್–ಕರ್ನಾಟಕ ಭಾಗದ ದೃಡೀಕರಣ ಪತ್ರ
11. ಪದೋನ್ನತಿ ನಿರಾಕರಿಸಿದ್ದಲ್ಲಿ ಈ ಬಗ್ಗೆ ದೃಢೀಕರಣ ಪತ್ರ
12. ಹಿರಿಯ ವೈದ್ಯಕೀಯ ರೇಡಿಯಾಲಾಜಿಕಲ್ ಟೆಕ್ನಾಲಾಜಿಸ್ಟ್ ಖಾಲಿ ಹುದ್ದೆಗಳ ಸ್ಥಳಗಳ ವಿವರಗಳು

ವಿಶೇಷ ಸೂಚನೆ: ರಹಸ್ಯ ವರದಿ ಸಲ್ಲಿಸಿದ ತಕ್ಷಣ ಹಿರಿಯ ರೇಡಿಯಾಲಾಜಿಕಲ್ ಹುದ್ದೆಗೆ ಪದೋನ್ನತಿಗೆ ಅರ್ಹರು ಎಂದು ಭಾವಿಸತಕ್ಕದಲ್ಲ

ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,

ಪ್ರತಿಯನ್ನು:

1. ಎಲ್ಲಾ ನಿರ್ದೇಶಕರು ಹಾಗೂ ಡೀನ್‌ರವರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸೆ
2. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಆಕುಕ ಸೇವೆಗಳು, ಬಿಬಿಎಂಪಿ, ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ
3. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
4. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ,
5. ಎಲ್ಲಾ ವೈದ್ಯಕೀಯ ಅಧೀಕ್ಷಕರು/ವೈದ್ಯಾಧಿಕಾರಿಗಳು/ಆಡಳಿತ ವೈದ್ಯಾಧಿಕಾರಿಗಳು
6. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
7. ಕಛೇರಿ ಪ್ರತಿ/ ಆದೇಶದ ಪ್ರತಿ.